ರಾಜ್ಯದಲ್ಲಿ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಅನುಷ್ಠಾನಗೊಳಿಸಿರುವ ಕುಡಿಯುವ ನೀರಿನ ಯೋಜನೆಗಳು.

280(2915) ಶ್ರೀ ಶಿವರಾಮು ಬಿ. (ಗಂಡಸಿ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವಿಶ್ವಬ್ಯಾಂಕ್ ಯೋಜನೆಯಡಿ ಅನುಷ್ಠಾನಗೊಳಿಸಿರುವ ನೀರು ಸರಬರಾಜು ಯೋಜನಾ ಕಾಮಗಾರಿಗಳನ್ನು ಗ್ರಾಮ ಪಂಚಾಯಿತಿಗೆ ವಹಿಸಿಕೊಡಲು ಸರ್ಕಾರ ಕ್ರಮ ತೆಗೆದುಕೊಂಡಿದೆಯೇ; ಇಲ್ಲದಿದ್ದರೆ ವಿಳಂಬಕ್ಕೆ ಕಾರಣವೇನು?

ಆ) ಯೋಜನೆಯ ಅನುಷ್ಠಾನ ಸಮರ್ಪಕವಾಗಿ ಅನುಷ್ಠಾನಕ್ಕೆ ಬಂದಿರುತ್ತದೆಯೆ; ಇಲ್ಲದಿದ್ದಲ್ಲಿ, ಸರಿಪಡಿಸಲು ತೆಗೆದುಕೊಂಡಿರುವ ಕ್ರಮಗಳೇನು?

ಇ) ಅನುಷ್ಠಾನ ಹಂತದಲ್ಲಿ ಲೋಪದೋಷಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅದನ್ನು ಸರಿಪಡಿಸಲು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :—

ಅ) ವಿಶ್ವಬ್ಯಾಂಕ್ ಜೊತೆ ಮಾಡಿಕೊಂಡ ಒಪ್ಪಂದದನ್ವಯ ನೀರು ಸರಬರಾಜು ಯೋಜನೆಗಳನ್ನು ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಗೆ ಕಾರ್ಯಾಚರಣೆ ಮತ್ತು ನಿರ್ವಹಣೆಯ ಪೂರ್ಣ ಬಳಕೆ ವೆಚ್ಚವನ್ನು ಭರಿಸಲು ಹಸ್ತಾಂತರಿಸಬೇಕಾಗಿರುತ್ತದೆ. ಗ್ರಾಮ ಪಂಚಾಯಿತಿಗಳು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993, ನಿಯಮ 61(ಎ) ಅನ್ವಯ ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಯನ್ನು ಗ್ರಾಮ ಪಂಚಾಯಿತಿಗಳ ಸಮಿತಿಗಳನ್ನಾಗಿ ರಚಿಸಬೇಕಾಗಿರುತ್ತದೆ. ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿ ನೀರು ಸರಬರಾಜಿನ ದರಗಳನ್ನು ಸಂಗ್ರಹಿಸಲು ಗ್ರಾಮ ಪಂಚಾಯಿತಿಯಿಂದ ಅಧಿಕಾರ ಪಡೆದಿರುತ್ತದೆ. ಇದು ಗ್ರಾಮೀಣ ನೀರು ಸರಬರಾಜು ವಲಯ ಸುಧಾರಣೆ ಕಾರ್ಯತಂತ್ರವಾಗಿ ಗ್ರಾಮ ಸಮುದಾಯಗಳೇ ನೀರು ಸರಬರಾಜು ಯೋಜನೆಗಳನ್ನು ಸಂಪೂರ್ಣ ನಿರ್ವಹಣೆ ಮಾಡುವ ನಿಬಂಧನೆಗೆ ಸಮಾನಂತರವಾಗಿರುತ್ತದೆ.

ಪೂರ್ಣಗೊಂಡಿರುವ ಕೆಲವು ಯೋಜನೆಗಳನ್ನು ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಗಳಿಗೆ ವಹಿಸಿಕೊಡಲು ತಡವಾಗಿರುವದಕ್ಕೆ ಕಾರಣಗಳು ಕೆಳಕಂಡಂತಿವೆ.

ಅ) ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಗಳ ಹೆಚ್ಚಿನ ವಿತರಣಾ ವ್ಯವಸ್ಥೆ/ಹೆಚ್ಚಿನ ಕಾಮಗಾರಿಗಳ ಬೇಡಿಕೆ ಸಲ್ಲಿಸಿರುವುದು.

ಆ) ಅಂತರ್ಜಲಮಟ್ಟದ ಕುಸಿತದ ಪರಿಣಾಮವಾಗಿ ನೀರಿನ ಮೂಲ ಬತ್ತಿರುವುದರಿಂದ ಹೊಸ ಮೂಲದ ಹಾಗೂ ಹೆಚ್ಚಿನ ಕಾರ್ಯಗಳ ಸ್ಥಾಪನೆಯ ಅವಶ್ಯಕತೆಯಿರುತ್ತದೆ.

ಇ) ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಗಳು ಯೋಜನೆಯ ನೀರಿನ ವೆಚ್ಚವನ್ನು ಸಂಗ್ರಹಿಸಿ ಪೂರ್ಣ ನಿರ್ವಹಣೆಯನ್ನು ಭರಿಸಲು ಈಗ ಸಿದ್ಧರಿಲ್ಲದ ಕಾರಣ ಪೂರ್ಣಗೊಂಡ ಯೋಜನೆಯನ್ನು ತೆಗೆದುಕೊಳ್ಳಲು ಅಸಕ್ತಿ ವಹಿಸದಿರುವುದು.

ಈ) ಸ್ಥಳೀಯ ಸಾಮಾಜಿಕ ಸಮಸ್ಯೆಗಳು ಇನ್ನಿತರೆ.

ಅ) ಮೂಲ ಯೋಜನಾ ವಿನ್ಯಾಸದಂತೆ ಯೋಜನೆಗಳು ತೃಪ್ತಿಕರವಾಗಿ ಪೂರ್ಣಗೊಂಡಿರುತ್ತದೆ ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಗಳ ಬೇಡಿಕೆಯಂತೆ ಹೆಚ್ಚಿನ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ನೀರಿನ ಮೂಲ ಕುಗ್ಗಿರುವ ಅಥವಾ ಬತ್ತಿಹೊಗಿರುವ ಕಡೆಗಳಲ್ಲಿ ಹೊಸ ನೀರಿನ ಮೂಲಗಳನ್ನು ಸ್ಥಾಪಿಸಲಾಗಿದ್ದು ಮಾದರಿಯಂತೆ ಕ್ಲುಪ್ತ ಪ್ರಮಾಣ ನೀರನ್ನು ಒದಗಿಸಲು ಹೆಚ್ಚು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಇ) ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಗಳಿಗೆ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಕಾರ್ಯಾರಂಭ ಮಾಡಿರುವ ಯೋಜನೆಗಳನ್ನು ಹಸ್ತಾಂತರಿಸಬೇಕಿದ್ದರೂ ಸಹ ಗುತ್ತಿಗೆದಾರರು ಯೋಜನೆಗಳ ಕಾರ್ಯಾರಂಭಗೊಂಡ ಒಂದು ವರ್ಷದವರೆಗೂ ಕೆಲಸದಲ್ಲಿನ ದೋಷಗಳಿಗೆ ಹೊಣೆಗಾರರಾಗಿರುತ್ತಾರೆ. ಸದರಿ ಅವಧಿಯಲ್ಲಿ ದೋಷಗಳೇನಾದರೂ ಇದ್ದಲ್ಲಿ, ಗುತ್ತಿಗೆದಾರರು ಸರಿಪಡಿಸಬೇಕಾಗಿರುತ್ತದೆ. ಒಂದು ವೇಳೆ ಗುತ್ತಿಗೆದಾರರು ನಿರ್ವಹಿಸದಿದ್ದಲ್ಲಿ, ಸರ್ಕಾರವು ಅಂತಹ ದೋಷಗಳನ್ನು ಸರಿಪಡಿಸಲು ಕ್ರಮ ಕೈಗೊಂಡು ಸದರಿ ವೆಚ್ಚವನ್ನು ಗುತ್ತಿಗೆದಾರರ ರಿಟೆನ್ಷನ್ ಮೊತ್ತದಲ್ಲಿ ಕಟಾಯಿಸಿಕೊಳ್ಳಬಹುದು.

ಶ್ರೀ ಬಿ. ಶಿವರಾಮ್:— ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಮೂಲಭೂತವಾಗಿ ನನ್ನ ಪ್ರಶ್ನೆ ಏನೆಂದರೆ, ಗ್ರಾಮ ನಿರ್ವಾಹಣ ಸಮಿತಿಗಳು ಯೋಜನೆಯನ್ನು ನಿರ್ವಹಿಸುವಲ್ಲಿ ಆಗುವುದಿಲ್ಲವೆನ್ನತಕ್ಕ ಮಾತನ್ನು ಹೇಳಿದಾಗ ತಾವು ಮುಂದಿನ ಯಾವ ಕ್ರಮವನ್ನು ಅನುಸರಿಸುತ್ತೀರಿ ಎಂಬುದು ಮೊದಲನೆಯದು. ಕಳಪೆ ಕಾಮಗಾರಿಗಳು ಮತ್ತು ಅಪೂರ್ಣಗೊಂಡ ಕಾಮಗಾರಿಗಳನ್ನು ಪೂರ್ಣಗೊಳಿಸುವುದಕ್ಕೆ ಮತ್ತು ಆ ಗ್ರಾಮ ನಿರ್ವಾಹಣ ಸಮಿತಿಗಳಿಗೆ ವಹಿಸಿಕೊಡುವುದಕ್ಕೆ ಯಾವ ಕ್ರಮವನ್ನು ಎಷ್ಟು ಬೇಗ ಅನುಸರಿಸುತ್ತೀರಿ ಎಂಬುದು ನನ್ನ ಎರಡನೆ ಪ್ರಶ್ನೆಯಾಗಿದೆ.

ಶ್ರೀ ಎಂ.ವೈ. ಘೋರ್ಪಡೆ :— ಮಾನ್ಯ ಅಧ್ಯಕ್ಷರೆ, ವಿಶ್ವ ಬ್ಯಾಂಕ್‌ನ ಯೋಜನೆಯ ಅಡಿಯಲ್ಲಿ ರಾಜ್ಯದ 1,104 ಹಳ್ಳಿಗಳಲ್ಲಿ ಈ ಕೆಲಸವನ್ನು ಮಾಡುತ್ತಿದ್ದೇವೆ. ಇದರಲ್ಲಿ 981 ಹಳ್ಳಿಗಳಲ್ಲಿ ಕೆಲಸ ಪೂರ್ತಿಯಾಗಿದೆ. 762 ಹಳ್ಳಿಗಳಲ್ಲಿ ಕೆಲಸ ಪೂರ್ಣಮಾಡಿ ಹ್ಯಾಂಡ್‌ಓವರ್ ಸಹ ಮಾಡಿದ್ದಾರೆ. 219 ಹಳ್ಳಿಗಳಲ್ಲಿ ಪಾರ್ಷಿಯಲಿ ಕೆಲಸ ಪೂರ್ಣವಾಗಿದೆ. 123 ಹಳ್ಳಿಗಳಲ್ಲಿ ಕೆಲಸ ನಡೆಯುತ್ತಿದೆ. ಇದಕ್ಕೆ 31.5.2001 ರವರೆಗೆ 498 ಕೋಟಿ ರೂ. ಖರ್ಚಾಗಿದೆ. ಕಾಮಗಾರಿಯಲ್ಲಿ ಏನಾದರೂ ತೊಂದರೆ ಬಂದರೆ ಗುತ್ತಿಗೆದಾರರೇ ಸರಿಪಡಿಸಬೇಕೆಂಬು ಒಪ್ಪಂದವಿದೆ. ಅದನ್ನು ಗುತ್ತಿಗೆದಾರರು ಮಂಡಿಸಿದ್ದಾರೆ, ಏನಾದರೂ ಮಿತಿಮೀರಿ ಹೋಗಿದ್ದರೆ ಸರ್ಕಾರ ಸಹಾಯಕ್ಕೆ ಬಂದೇ ಬರುತ್ತದೆ. ಅದು ಅನಿವಾರ್ಯ ಕೂಡ.

ಶ್ರೀ ಬಿ. ಶಿವರಾಮ್ :— ಕಾಮಗಾರಿಯಲ್ಲಿ ತೊಂದರೆ ಇದ್ದರೆ ಸರ್ಕಾರ ಗಮನಹರಿಸಿ ಇರುವ ಲೋಪದೋಷಗಳನ್ನು ಸರಿಪಡಿಸುತ್ತೇವೆಂದು ಉತ್ತರದಲ್ಲಿ ತಿಳಿಸಿರುತ್ತೀರಿ. ಆ ರೀತಿ ಲೋಪದೋಷವಾಗಿರತಕ್ಕ ಕಾಮಗಾರಿಗಳ ಬಗ್ಗೆ ಗುರುತಿಸಿ ತಮಗೆ ಪತ್ರದ ಮೂಲಕ ತಿಳಿಸಿದ್ದರೂ ಇದರ ಬಗ್ಗೆ ತಾವು ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದರೂ ಇದುವರೆಗೆ ಅದನ್ನು ಸರಿಪಡಿಸುವ ಕೆಲಸವಾಗಿಲ್ಲ. ಆದ್ದರಿಂದ ಸರ್ಕಾರ ಈ ಜವಾಬ್ದಾರಿಯನ್ನು ಯಾರಿಗೆ ವಹಿಸಿ ಸಮಸ್ಯೆಯನ್ನು ಕೂಡಲೇ ಬಗೆಹರಿಸುತ್ತೀರಾ ಎಂದು ಚುಟುಕಾಗಿ ತಮಗೆ ಕೇಳಿದೆ. ನಾನು ಆದಕ್ಕೆ ಸಬಂಧಪಟ್ಟಂತೆ ಲೋಪದೋಷವಾಗಿರುವ ಕಾಮಗಾರಿಗಳ ಬಗ್ಗೆ ತಮಗೆ ಪತ್ರವನ್ನು ಬರೆದಿದ್ದೇನೆ, ಆ ಎಲ್ಲಾ ಪತ್ರಗಳು ನನ್ನ ಹತ್ತಿರ ಇವೆ.

ಶ್ರೀ ಎಂ.ವೈ. ಘೋರ್ಪಡೆ :— ಮಾನ್ಯ ಅಧ್ಯಕ್ಷರೆ, ಅವರು ಜನರಲ್ ಆಗಿ ಪ್ರಶ್ನೆ ಕೇಳಿದ್ದರೂ ನಾನು ಸ್ಪೆಸಿಫಿಕ್ ಆಗಿ ಉತ್ತರನ್ನು ಕೊಡುವುದು ಒಳ್ಳೆಯದೆಂದು ಅನ್ನಿಸುತ್ತದೆ. ಕೆಲವು ಕಾಮಗಾರಿಗಳ ಬಗ್ಗೆ ಅವರು ದೂರನ್ನು ಕೊಟ್ಟಿದ್ದಾರೆ. ಆ ದೂರಿನ ಬಗ್ಗೆ ಸೆಂಟ್ರಲ್ ಪ್ಲಾಸ್ಟಿಕ್ ಇಂಜಿನಿಯರಿಂಗ್ ಟೆಕ್ನಾಲಜಿ ಮೈಸೂರು, ಹಾಗೂ ಕರ್ನಾಟಕ ಇಂಜಿನಿಯರಿಂಗ್ ರಿಸರ್ಚ್ ಸ್ಟೇಷನ್, ಕೆ.ಆರ್. ಸಾಗರ ಈ ಎರಡು ಸಂಸ್ಥೆಗಳಿಗೆ ಕೆಲಸದ ಕ್ವಾಲಿಟಿ ಬಗ್ಗೆ ಮತ್ತು ಅವರು ಮಾಡಿರುವ ದೂರಿನ ಬಗ್ಗೆ ಪರಿಶೀಲನೆ ಮಾಡಿ ವರದಿ ಕೊಡಲು ಮೂರನೇ ಪಾರ್ಟಿಗೆ ವಹಿಸಿದ್ದೇವೆ. ಅವರು ವರದಿ ನೀಡಿದ ತಕ್ಷಣ ಏನಾದರೂ ದೋಷ ಇದ್ದರೆ ಸರಿಪಡಿಸುತ್ತೇವೆ.

ಶ್ರೀ ಬಿ. ಶಿವರಾಮ್ :— ತಾವು ಎಷ್ಟು ದಿವಸಗಳಲ್ಲಿ ಇದನ್ನು ಬಗೆಹರಿಸುತ್ತೀರಾ ಎಂಬ ಬಗ್ಗೆ ನಿಖರವಾಗಿ ಹೇಳಿ ಸಾಕು. ಇದರ ಬಗ್ಗೆ ಸಾಕಷ್ಟು ಪತ್ರ ವ್ಯವಹಾರ ನಡೆಯುತ್ತಿದೆಯೇ ವಿನಹ ಪರಿಹಾರ ಸಿಗುತ್ತಿಲ್ಲ.

ಶ್ರೀ ಎಂ.ವೈ. ಘೋರ್ಪಡೆ :— ಆ ಪೈಪ್‌ಲೈನ್ ಎಷ್ಟು ಇದೆ, ಅದಕ್ಕಿಂತ ಜಾಸ್ತಿ ಹಣವನ್ನು ಬಿಡುಗಡೆ ಮಾಡಿದ್ದಾರೆ ಎನ್ನತಕ್ಕ ಒಂದು ದೂರು ಬಂದಿದೆ. ಪೈಪಿನ ಗುಣಮಟ್ಟದ ಬಗ್ಗೆ ಮತ್ತೊಂದು ದೂರು ಇದೆ. ಅದರ ಬಗ್ಗೆ ನಾವೇ ತೀರ್ಮಾನ ಮಾಡಬಾರದು, ಮೂರನೇ ಪಾರ್ಟಿಗೆ ವಹಿಸಿಕೊಟ್ಟರೆ ಪೂರ್ಣವಾದ ನ್ಯಾಯ ಒದಗಿಸಿದಂತಾಗುತ್ತದೆಂದು ನಾವು ಈ ಕೆಲಸ ಮಾಡಿದ್ದೇವೆ. ಈ ಮೂರನೇ ಪಾರ್ಟಿಯವರಿಗೆ ವರದಿ ನೀಡಲು ಏನು ವೆಚ್ಚವಾಗುತ್ತದೆ ಅದನ್ನೂ ಕೊಟ್ಟಿದ್ದೇವೆ.

ಶ್ರೀ ಬಿ. ಶಿವರಾಮ್ :— ಲೋಪದೋಷದ ಬಗ್ಗೆ ನಾನು ಹೇಳುವುದಕ್ಕಿಂತ ಅವರ ಕಛೇರಿಯಲ್ಲಿ ಕೆಲಸ ಮಾಡುತ್ತಿರುವ ಜಿಲ್ಲಾ ವ್ಯವಸ್ಥಾಪಕ ನಿರ್ದೇಶಕರೇ ಪತ್ರವನ್ನು ಬರೆದಿದ್ದಾರೆ. ನಾನು ಆರೋಪಗಳನ್ನು ಮಾಡಿಲ್ಲ. ಇದು ಹೇಗೆ ದೃಢೀಕರಣಗೊಂಡಿದೆ ಎಂಬುದಕ್ಕೆ ಅವರ ಪ್ರಶ್ನೆಯ್ಲೇ ಉತ್ತರವನ್ನು ಹೇಳಿದ್ದಾರೆ. ಪೂರ್ಣಗೊಂಡಿರುವ ಕೆಲವು ಯೋಜನೆಗಳು ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಗಳಿಗೆ ವಹಿಸಿಕೊಡಲು ಕಾರಣಗಳನ್ನು ನಾಲ್ಕು ಅಂಶಗಳಲ್ಲಿ ಕೊಟ್ಟಿದ್ದಾರೆ. ಈ ನಾಲ್ಕು ಅಂಶಗಳಲ್ಲಿ ಇದು ಬರುತ್ತದೆ. ಲೋಪದೋಷವಿರುವುದರಿಂದ ಗ್ರಾಮ ಸಮಿತಿಗಳು ಇದರ ನಿರ್ವಾಹಣೆಯನ್ನು ವಹಿಸಿಕೊಳ್ಳಲು ಸಿದ್ಧರಿಲ್ಲ. ಅವರು ವಹಿಸಿಕೊಳ್ಳದಿದ್ದ ಪಕ್ಷದಲ್ಲಿ ಗ್ರಾಮ ಸಮಿತಿಗೆ ಬದಲಾಗಿ ಗ್ರಾಮ ಪಂಚಾಯಿತಿಗೆ ವಹಿಸಿಕೊಡುವ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಂ.ವೈ. ಘೋರ್ಪಡೆ :— ವೈಯಕ್ತಿಕವಾಗಿ ಅವರೇನು ದೂರು ಕೊಟ್ಟಿದ್ದಾರೆ ಅದರ ಬಗ್ಗೆ ಮೂರನೇ ವ್ಯಕ್ತಿಯಿಂದ ಪರಿಶೀಲನೇ ಮಾಡಿಸುತ್ತಿದ್ದೇವೆ. ಇದಕ್ಕಿಂತ ಜಾಸ್ತಿ ಏನು ಹೇಳಲಿ.

ಶ್ರೀ ಕೆ.ಹೆಚ್. ಹನುಮೇಗೌಡ :— ಸನ್ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರಲಿಚ್ಛಿಸುತ್ತೇನೆ. ಹಾಸನ ಕ್ಷೇತ್ರದಲ್ಲಿ ಉದ್ದೂರು ಒಂಬುದೊಂದು ಗ್ರಾಮ ಇದೆ. ಆ ಗ್ರಾಮದಲ್ಲಿ ವಿಶ್ವಬ್ಯಾಂಕ್ ಯೋಜನೆ ಅಡಿಯಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಕಾರ್ಯತಗ ಮಾಡಿದ್ದಾರೆ. ಗ್ರಾಮದವರು ಎಷ್ಟು ಹಣವನ್ನು ಕಟ್ಟಬೇಕಾಗಿತ್ತೋ ಅಷ್ಟು ಹಣವನ್ನು ಅವರು ಕಟ್ಟಿದ್ದಾರೆ. ಸುಮಾರು 20 ವರ್ಷಗಳ ಹಿಂದೆ ಆ ಊರಿನಲ್ಲಿ ಒಂದು ಓವರ್‌ಹೆಡ್ ಟ್ಯಾಂಕ್ ಕಟ್ಟಿ ಒಂದು ಸಣ್ಣ ಮಿನಿ ವಾಟರ್ ಸಪ್ಲೈ ಮಾಡಿದ್ದರು. ವಿಶ್ವಬ್ಯಾಂಕ್ ಯೋಜನೆ ಅಡಿಯಲ್ಲಿ ಪುನ: ಆ ಊರಿಗೆ ಕುಡಿಯುವ ನೀರಿನ ಯೋಜನೆಯನ್ನು ತೆಗೆದುಕೊಂಡಾದ ಮೇಲೆ ಗ್ರಾಮಸ್ಥರು ಮತ್ತೊಂದು ಓವರ್‌ಹೆಡ್ ಟ್ಯಾಂಕ್‌ಗಾಗಿ ಮನವಿ ಮಾಡಿದ್ದಾರೆ. ಚಿಕ್ಕದಾದ ಓವರ್‌ಹೆಡ್ ಟ್ಯಾಂಕ್ ನಿರ್ಮಾಣವಾದ ಮೇಲೆ ಊರಿನ ಜನಸಂಖ್ಯೆ ನಾಲ್ಕರಷ್ಟು ಜಾಸ್ತಿಯಾಗಿದೆ, ಇರುವ ಟ್ಯಾಂಕ್‌ನಲ್ಲಿಯ ನೀರು ಗ್ರಾಮಕ್ಕೆ ಸಾಕಾಗುವುದಿಲ್ಲ, ಅದ್ದರಿಂದ ಮತ್ತೊಂದು ಓವರ್‌ಹೆಡ್ ಟ್ಯಾಂಕ್ ಕಟ್ಟಿಕೊಡಿ ಎಂದು ಗ್ರಾಮಸ್ಥರು ಕೇಳಿದ್ದಾರೆ.

ಯಾರೋ ದುರುದ್ದೇಶದಿಂದ ಹೇಳಿದರು ಎಂದುಕೊಂಡು ಅಲ್ಲಿ ಓವರ್‌ಹೆಡ್ ಟ್ಯಾಂಕ್ ಕಟ್ಟದೇ ಹಾಗೇ ಬಿಟ್ಟು ಯೋಜನೆಯನ್ನು ಮುಗಿಸಿದ್ದಾರೆ. ನಾನು ಈ ಬಗ್ಗೆ 2-3 ಬಾರಿ ಪತ್ರಗಳನ್ನು ಬರೆದು ಅವರಿಗೆ ಹೇಳಿದ್ದೆ. ಈ ಯೋಜನೆಯಿಂದ ಜನಗಳಿಗೆ ಕುಡಿಯುವ ನೀರು ಪೂರ್ಣವಾಗಿ ಸಿಗಬೇಕು. ಈಗ ಇರತಕ್ಕಂಥ ಓವರ್‌ಹೆಡ್ ಟ್ಯಾಂಕ್‌ಗೆ ನಾಲ್ಕು ಸಾರಿ ಭರ್ತಿ ಮಾಡಿದರೂ ಕೂಡ ಈಗಿರುವ ಜನಸಂಖ್ಯೆಗೆ ಅದು ಸಾಕಾಗುವುದಿಲ್ಲ. ದಯವಿಟ್ಟು ಓವರ್‌ಹೆಡ್ ಟ್ಯಾಂಕ್ ಅನ್ನು ಮೊದಲು ಎಸ್ಟಿಮೇಟ್‌ನಲ್ಲಿರುವ ರೀತಿಯಲ್ಲಿ ನಿರ್ಮಾಣ ಮಾಡಿಕೊಡಬೇಕು. ನಾನು ಹಾಗದ ಬರೆದ ಊರಿನವರು ಮನವಿ ಮಾಡಿಕೊಂಡಿದ್ದರೂ ಕೂಡ ಇದು ಆಗಿರುವುದಿಲ್ಲ. ಇದನ್ನು ಯಾವಾಗ ಮಾನ್ಯ ಮಂತ್ರಿಗಳು ಮಾಡಿಸಿಕೊಡುತ್ತಾರೆ.?

ಶ್ರೀ ಎಂ.ವೈ. ಘೋರ್ಪಡೆ :— ಮಾನ್ಯ ಶಿವರಾಮುರವರ ಪರ್ಟಿಕ್ಯುಲರ್ ಪ್ರಶ್ನೆಗೆ ನಾನು ಉತ್ತರಿಸಿದ್ದೇನೆ. ಅದರ ಬಗ್ಗೆ ಮಾತ್ರ ನನ್ನ ಬಳಿ ಈಗ ಮಾಹಿತಿ ಇದೆ.

ಅಧ್ಯಕ್ಷರು :— ಅದರ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿ. ಮಾನ್ಯ ಮಂತ್ರಿಗಳು ಉತ್ತರ ಹೇಳುವುದಕ್ಕೆ ಸಿದ್ದರಿದ್ದರೆ ನನ್ನದೇನೂ ಅಬ್ಜೆಕ್ಷನ್ ಇಲ್ಲ. ಪ್ರಶ್ನೆ ಇಡೀ ರಾಜ್ಯಕ್ಕೆ ಸಂಬಂಧಿಸಿದಂತೆ ಇದ್ದರೂ ಕೂಡ ಎಲ್ಲಾ ಸದಸ್ಯರು ತಮ್ಮ ತಮ್ಮ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಉಪ ಪ್ರಶ್ನೆಗಳನ್ನು ಕೇಳುತ್ತಿದ್ದರೆ ಮಾನ್ಯ ಸಚಿವರ ಬಳಿ ಉತ್ತರ ಎಲ್ಲಿರುತ್ತದೆ? ಮಾನ್ಯ ಸಚಿವರು ಏನಾದರೂ ಉತ್ತ ಹೇಳುವುದಿದ್ದರೆ ಹೇಳಿ.

ಶ್ರೀ ಎಂ.ವೈ. ಘೋರ್ಪಡೆ :— ನಾನು ಸದರಿ ಪ್ರಶ್ನೆಗೆ ಸಂಪೂರ್ಣವಾದಂತಹ ಉತ್ತರವನ್ನು ಕೊಟ್ಟಿದ್ದೇನೆ. ಸ್ಪೆಸಿಫಿಕ್ಕಾಗಿ ಯಾವುದಾದದರೂ ಸ್ಕೀಮ್‌ನ ಬಗ್ಗೆ ಮಾನ್ಯ ಸದಸ್ಯರುಗಳು ಕೇಳುವುದಾದರೆ, ಅದರ ಬಗ್ಗೆ ನನಗೆ ಅವರು ಮಾಹಿತಿಯನ್ನು ಕೊಟ್ಟರೆ ನಾನು ಆ ಬಗ್ಗೆ ನೋಡಿಸುತ್ತೇನೆ. ಯಾವುದೋ ಒಂದು ಪ್ರಶ್ನೆಯನ್ನು ಸಡನ್ನಾಗಿ ಇಲ್ಲಿ ಕೇಳಿದರೆ ನಾನು ಹೇಗೆ ಉತ್ತರ ಕೊಡಲು ಸಾಧ್ಯರಾಗುತ್ತದೆ? ಜನರಲ್ ನೇಚರ್ ಆಗಿರತಕ್ಕ ಪ್ರಶ್ನೆಗೆ ನಾನು ಈಗಾಗಲೇ ಉತ್ತರ ನೀಡಿದ್ದೇನೆ. ಇಂಡಿವಿಜ್ಯುಯಲ್ ಪ್ರಶ್ನೆಗಳಿಗೆ ನಾನು ಮಾಹಿತಿ ಇಲ್ಲದೆ ತಕ್ಷಣವೇ ಹೇಗೆ ಉತ್ತರಿಸಲು ಸಾಧ್ಯ? ಅದುದರಿಂದ ಅದರ ಬಗ್ಗೆ ನನಗೆ ಮಾಹಿತಿ ಕೊಟ್ಟರೆ, ತಕ್ಷಣವೇ ಅದನ್ನು ನಾನು ಅಧಿಕಾರಿಗಳಿಗೆ ಕಳುಹಿಸಿಕೊಟ್ಟು ನೋಡಿಸುತ್ತೇನೆ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ :— ಮಾನ್ಯ ಅಧ್ಯಕ್ಷರೇ, ಕಳೆದ ಬಾರಿ ಸದನದಲ್ಲಿ ಇದು ಪ್ರಸ್ತಾಪವಾದ ಸಂದರ್ಭದಲ್ಲಿ ಗ್ರಾಮ ನ್ಯೆರ್ಮಲ್ಯ ಸಮಿತಿ ಮತ್ತು ಗ್ರಾಮ ಪಂಚಾಯಿತಿಗಳ ನಡುವೆ ಸಂಬಂಧ ಸರಿಯಾಗಿ ಇಲ್ಲದಿರುವುದರಿಂದ ವ್ಯವಸ್ಥೆ ಸರಿಯಾಗಿ ಮಾಡುವ ಉದ್ದೇಶದಿಂದ ನೀರು ಸರಬರಾಜು ಯೋಜನಾ ಕಾಮಗಾರಿಗಳನ್ನು

ಗ್ರಾಮ ಪಂಚಾಯಿತಿಗೆ ವಹಿಸಿಕೊಡಬೇಕು ಎಂದು ನಾವು ಕೋರಿದ್ದೆವು. ಮಾನ್ಯ ಸಚಿವರು ಇದನ್ನು ಪರಿಶೀಲನೆ ಮಾಡುತ್ತೇನೆ ಎಂಬ ಮಾತನ್ನು ಸಹ ಇಲ್ಲಿ ಹೇಳಿದ್ದರು. ಗ್ರಾಮ ನೈರ್ಮಲ್ಯ ಸಮಿತಿಯರು ಯಾವುದೇ ರೀತಿಯಿಂದ ದುಡ್ಡು ವಸೂಲು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅವರಿಂದ ಸರಿಯಾಗಿ ಕೆಲಸ ಮಾಡಲಿಕ್ಕಾಗುತ್ತಿಲ್ಲ. ಈ ವ್ಯವಸ್ಥೆಯನ್ನು ಸಂಪೂರ್ಣವಾಗಿ ವಹಿಸಿದ್ದೇ ಆದರೆ ಖಂಡಿತಾವಾಗಿಯೂ ಕೂಡ ಕೆಲಸವನ್ನು ಮಾಡಲಿಕ್ಕೆ ಸರಿಯಾದಂತಹ ವ್ಯವಸ್ಥೆ ಆಗುತ್ತದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರಿಸಬೇಕು.

ಶ್ರೀ ಹೆಚ್.ಎಂ. ರೇವಣ್ಣ :— ಗ್ರಾಮ ನೈರ್ಮಲ್ಯ ಸಮಿತಿಯವರು ದುಡ್ಡು ವಸೂಲಿ ಮಾಡಿ ನೀರು ಬಿಡುವವನಿಗೂ ಕೂಡ ಸಂಬಳ ಕೊಡಂವಂತಹ ಪರಿಸ್ಥಿತಿಯಲ್ಲಿ ಇಲ್ಲ. ಇದನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸಿದರೆ ಅನುಕೂಲವಾಗುತ್ತದೆ.

ಶ್ರೀ ಬಿ. ಶಿವರಾಮು :— ಗ್ರಾಮ ಪಂಚಾಯಿತಿಗಳಿಗೆ ವಹಿಸತಕ್ಕಂಥ ಕ್ರಮವನ್ನು ಸರ್ಕಾರ ದಯವಿಟ್ಟು ತೆಗೆದುಕೊಳ್ಳಬೇಕೆಂದು ಆಗ್ರಹಿಸುತ್ತಿದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ :—ವಿಲೇಜ್ ಕಮಿಟಿ ಏನಿದೆ ಅದನ್ನು ಗ್ರಾಮ ಪಂಚಾಯಿತಿಯೇ ರಚಿಸುತ್ತದೆ. ಗ್ರಾಮ ಪಂಚಾಯಿತಿಯ ಸದಸ್ಯರಲ್ಲದೇ ಬೇರೆಯವರನ್ನೂ ಕೂಡ ಅದರಲ್ಲಿ ಸೇರಿಸಲಿಕ್ಕೆ ಅವಕಾಶ ಇರುತ್ತದೆ. ಕಾನೂನಿನ ಪ್ರಕಾರ ಅವರಿಗೂ ಕೂಡ ಅಧಿಕಾರವನ್ನು ಕೊಟ್ಟಿರುತ್ತಾರೆ. ಗ್ರಾಮ ಪಂಚಾಯಿತಿ ಬೇರೆ, ಅದೇ ಬೇರೆ ಎಂದು ನಾವು ಗ್ರಹಿಸುವುದು ಅಷ್ಟೊಂದು ಸರಿಯಲ್ಲ. ಗ್ರಾಮ ಪಂಚಾಯಿತಿಯೇ ರಚಿಸಿರತಕ್ಕಂಥ ಸಮಿತಿ ಇದು. ಅದು ನೀರಿನ ಕೆಲಸಕ್ಕಾಗಿ ಪ್ರತ್ಯೇಕವಾಗಿ ಇದರ ಕಡೆಗೆ ಗಮನ ಕೊಡಬೇಕೆಂಬ ಉದ್ದೇಶದಿಂದ ಇದನ್ನು ಮಾಡಲಾಗಿದೆ. ವಿಶ್ವಬ್ಯಾಂಕ್ ನೆರವಿನ 900 ಕೋಟಿ ರೂ.ಗಳ ಕಾರ್ಯಕ್ರಮವನ್ನು ನಾವು ಈಗ ಪ್ರಾರಂಭ ಮಾಡುತ್ತಿದ್ದೇವೆ. ಅದರಲ್ಲಿ ಕೂಡ ವಿಲೇಜ್ ಕಮಿಟಿ ತಪ್ಪಿದ್ದಲ್ಲ. ಅದು ಇರಬೇಕೆಂದು ಎಲ್ಲರ ಅಭಿಪ್ರಾಯ ಇದೆ. ಗ್ರಾಮ ಪಂಚಾಯಿತಿಗೆ ಮತ್ತು ವಿಲೇಜ್ ಕಮಿಟಿಗೆ ನೇರವಾದಂತಹ ಸಂಬಂಧ ಇದೆ.

ನಾಗಮಂಗಲ ತಾಲ್ಲೂಕಿನ ಸರ್ವೆ ನಂ. 22, ಹಾಲಳ್ಳಿ ಗ್ರಾಮದಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಮದ್ಯ ತಯಾರು ಘಟಕ

ಶ್ರೀ ಚಲುವರಾಯಸ್ವಾಮಿ ಎನ್. (ನಾಗಮಂಗಲ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.